


# ಕವಿತೆ




ಎಸ್‌.ಜಿ. ಸಿದ್ಧರಾಮಯ್ಯ

ಕಲೆ: ಬಾದಲ್ ನಂಜುಂಡಸ್ವಾಮಿ




## ಅಪ್ಪ

ನಟ್ಟನಡು ರಾತ್ರಿಯಲ್ಲಿ
ಓದುವ ಪಠ್ಯದ ಸಾಲುಗಳಲ್ಲಿ
ಧುತ್ತನೆ ಎದುರಾಗಿ ನಿಲ್ಲುವೆ:
ಅರ್ಥ ಕಳೆದು ಬಿಳಿಯ ಹಾಳೆಯ
ಮೇಲೆ ಕರಿಯ ಅಕ್ಷರ ಸಾಲು.
ನಿಚ್ಚಳ ನೋಟದ ನಿನ್ನ ನಿಲುವು.

ಒಮ್ಮೆ ಬತ್ತಲು ತಲೆ
ಇನ್ನೊಮ್ಮೆ ಪೇಟಧಾರಿ.
ಲೇ ಅಯ್ಯಾ ಅದೇ ಕರೆ
ಒಳಗಿನೊಳಗ ಕಲಕುವ ಮೊರೆ
ಹೆಗಲಲ್ಲಿ ಮೊಮ್ಮಗನ ಹೊತ್ತು
ಹಾದಿ ಬೀದಿಯಲ್ಲಿ ಸುತ್ತು.

ಕಚೇರಿಯಿಂದ ಬರುವ
ಸೊಸೆ ಮುದ್ದುಗಾಗಿ
ಶತಪಥದ ನಡೆಯಲ್ಲಿ ಎದುರಾಗಿ
ಪರಂಪರೆಯ ಸಿರಿಗಿರಿಯ ಹೊತ್ತು
ಧನ್ಯತೆಯ ಭಾವದನುರಾಗಿ.

ಪಡೆವುದಕ್ಕಿಂತ
ಕೊಡುವುದರಲ್ಲೇ ಕರ್ಣತೃಪ್ತ

ನಿಂತಕಡೆ ನಿಂತವನಲ್ಲ
ಕುಂತಕಡೆ ಕುಂತವನಲ್ಲ
ಜೋಳಿಗೆಯಿರದ ಜೋಗಿಮಲ್ಲ.

ಕೂಡಿಬಂದ ಬಾಳುವೆಯಲ್ಲಿ
ಹಾಡಿ ದುಡಿದೆ ಹರಸಿ ನಡೆದ
ಬರಿಗೈಯ ತಿರುಗಲು ತಿಪ್ಪ
ದಂಟಿನ ಬೆಳೆಯ ನಡುವೆ
ಧೀರ ದಿಗಂಬರ

ಕರಗಿವೆ ಪಠ್ಯದ ಸಾಲು
ಕರಿದು ಬಿಳಿದರ ನಡುವೆ ಹಸಿರು ಶಾಲು.





